

ಸಾಧ್ಯತೆಯೇ ನನಗೆ ಅಜೀಬಿನದ್ದನ್ನಿಸಿತು. ಅಲ್ಲದೆ, ಶಾರ್ವರೀಚಾರಿ – ಏನೆಷ್ಟೆಲ್ಲ ಆಸೆಪಟ್ಟು, ಅಂತಿಂತಲ್ಲದ ಆಸ್ಥಾಭೀಪ್ಸೆಯಿಟ್ಟು ನನ್ನ ಮೂಲಕ ಮನೆ ಕಟ್ಟಿಸಿಸಿಕೊಂಡಳಲ್ಲವೇ? ತಮ್ಮಿಬ್ಬರ ವೃದ್ಧಾಪ್ಯವನ್ನೂ ಮಿಕ್ಕು, ಅಥವಾ, ಇಬ್ಬರ ಇಳಿವಯಸ್ಸಿಗೂ ತಕ್ಕುದಾಗಿ ಮನೆಯಿರಬೇಕೆನ್ನುವ ದಾವೆ ಮಾಡಿದ್ದಳಲ್ಲವೇ? ಮಾತುಮಾತಿಗೂ ತನ್ನೀ ಗಂಡನನ್ನು ವಹಿಸಿಕೊಂಡು ಆಡುತ್ತಿದ್ದಳಲ್ಲವೇ? ತಾನೇ ತಾನಾಗಿ ಎಂದೂ ಈ ಮನೆಯ ವಿಚಾರದಲ್ಲಿ ಮನಸ್ಸು ಹೂಡಿದ್ದಿರದ ಚಾರಿಯನ್ನು ಒತ್ತಾಯದಿಂದ ತೊಡಗಿಸಿ ಇವನ ಇಷ್ಟಾನಿಷ್ಟಗಳ ಸಮಕ್ಕೂ ನನ್ನ ವಿನ್ಯಾಸವನ್ನು ತಿದ್ದಿಸಿದ್ದಳಲ್ಲವೇ? ಹೀಗೆ ನಿಡುಗಾಲದಿಂದ ಒಡನಿದ್ದು, ಈವಾಗ, ಇಳಿಗಾಲಕ್ಕೆ ಮುನ್ನ ಕಟ್ಟಿಕೊಂಡವನೇ ಒಲ್ಲೆಂದು ಬಿಟ್ಟುಹೊರಡುವುದೇ?

ಛೇ... ಅಂತಂದುಕೊಂಡೆ.

ಇನ್ನು, ದಾಂಪತ್ಯವಿರಸದ ವಿಚಾರವೇನೂ ನನಗೆ ಹೊಸತಲ್ಲವಲ್ಲ? ಈ ಕುರಿತಾಗಿ ಥೀಸಿಸು ಬರೆಯಬಲ್ಲಷ್ಟು ನುರಿತವನು ನಾನು. ಒಂದಲ್ಲ ಎರಡಲ್ಲ ಸರಿಯಾಗಿ ಮೂರುಸಾರಿ ಬಿರಿದು ಮುರಿದ ಮದುವೆಗಳಲ್ಲಿ ಇಡುಕಿಕೊಂಡವನಿಗೆ ಅನುಭವಕ್ಕೆ ಅರೆಯೇನು? ಅಥವಾ, ಸಂಸಾರವೇ ಆಗಿಬರದೆಂದು ಹಣೆಯಲ್ಲಿ ಬರೆದಿದ್ದಲ್ಲಿ ಬೇರೆ ತಥ್ಯವುಂಟೇ? ನಿಜಕ್ಕಾದರೆ, ಹೆಣ್ಣುಗಳನ್ನು ಕಳೆದುಕೊಂಡಷ್ಟೇ ಸಲೀಸಾಗಿ ಗಳಿಸಿಕೊಂಡವನು ನಾನು. ಸಲಸಲವೂ ಡಿವೋರ್ಸಿನ ಡಿಕರಿ ಬರುವ ಮುನ್ನವೇ ಹೊಸಬಳೊಬ್ಬಳಲ್ಲಿ ತೊಡಗಿದ್ದವನು. ಕೆಲವೊಮ್ಮೆ ಕೋರ್ಟಿನ ಹಿಯರಿಂಗನ್ನೂ ತಪ್ಪಿಸಿ